"ಸಾಯೋ ದಿವಸ ಹತ್ತರ ಬಂದಾವ. ನಾ ಯಮದೂತ... ಹೇಳ್ಳಿಕ್ಕೆ ಬಂದೇನಿ. ಎಲ್ಲಾ ಮುಗೀಲಿಕ್ಕತ್ತದ. ತಯಾರಾಗು..." ಎಂದು ಯಾರೋ ಒಬ್ಬ ಆಜಾನುಬಾಹು ಮಧ್ಯವಯಸ್ಕ ಹೇಳಿದ. ತೊಟ್ಟಿದ್ದು ಬಿಳಿಯ ಶರ್ಟು. ಉಟ್ಟಿದ್ದು ಕೊಕ್ಕರೆ ಗರಿಯಂಥ ಬೆಳ್ಳನೆ ಧೋತರ. ಕಡುಕಪ್ಪು ಮೈಬಣ್ಣ, ಬಿಳಿ ಕೂದಲು, ತುಸು ಮೊಂಡು ಮೂಗು. ಮುಖದಲ್ಲಿ ಗಡಸು ಕಳೆ. ದಪ್ಪದ ಗಿರಿಜಾ ಮೀಸೆ... ಅವೂ ಬಿಳಿಯಾಗಿದ್ದವೇ. ಕಂಗಳಲ್ಲಿನ ಕಠಿಣತೆ ಹೆದರಿಸುತ್ತಿತ್ತು. ನಖಶಿಖಾಂತ ಬೆವೆತಿದ್ದಳು ಸುಜಾತ. ದಿಗ್ಗನೆ ಎದ್ದು ಹೊದಿಕೆ ಕಿತ್ತೆಸೆದು ಕುಳಿತಳು. ಇದೆಂಥ ಹಾಳು ಕನಸು. ಸಮಯ ನೋಡಿದರೆ ಸರಿಯಾಗಿ ಬೆಳಗಿನ ನಾಲ್ಕೂವರೆ ಗಂಟೆಯಾಗಿತ್ತು. ಇನ್ನೂ ಹೆದರಿದಳು. ನಸುಕಿನಲ್ಲಿ ಬಿದ್ದ ಕನಸು ನಿಜವಾಗುತ್ತದಂತೆ. ಎಂದೂ ಇಲ್ಲದೇ... ಇಂದೇನು ಇಂಥ ಕನಸು ಬಿದ್ದದ್ದು... ಒಂದು ಕ್ಷಣ ಶರೀರದಲ್ಲಿನ ಸತ್ವವೆಲ್ಲ ಸೋರಿ ಹೋಗಿ ಕಂಗಳು ತುಂಬಿ ಬಂದವು. ಇನ್ನೂ ಮಧ್ಯವಯಸ್ಸು. ಮಕ್ಕಳ ಮದುವೆಯಾಗಿಲ್ಲ. ನಡುನೀರಿನಲ್ಲಿ ತೇಲುತ್ತಿರುವ ಸಂಸಾರ. ಮಗಳು ಕಾಲೇಜಿಗೆ ಹೋಗುತ್ತಿದ್ದಾಳೆ. ಇನ್ನೆರೆಡು ವರ್ಷಗಳಲ್ಲಿ ಬಿ.ಇ. ಮುಗಿಯುತ್ತದೆ. ನಂತರ ಕೆಲಸ... ಅಬ್ಬಬ್ಬಾ ಎಂದರೂ ಮೂರ್ನಾಲ್ಕು ವರ್ಷಗಳಲ್ಲಿ ಮದುವೆ ಮಾಡಬೇಕು. ಮಗ ಇನ್ನೂ ಪಿ.ಯು.ಸಿ.ನಲ್ಲಿ ಓದುತ್ತಿದ್ದಾನೆ. ಚಿಕ್ಕ ಹುಡುಗನಂತೆ ಆಟವಾಡಿಕೊಂಡು ಮಜವಾಗಿದ್ದಾನೆ. ಜವಾಬ್ದಾರಿಯಿಲ್ಲ. "ಓದು" ಎಂದು ದುಂಬಾಲು ಬೀಳಬೇಕು. ಪತಿ ಸಂಜಯನಿಗೂ ಐವತ್ತೆರೆಡು ವರ್ಷಗಳಷ್ಟೇ. ಇನ್ನು ತನಗೇನು... ಜಾಸ್ತಿ ಇಲ್ಲ. ಈ ವೈಶಾಖಕ್ಕೆ ನಲವತ್ತೆಂಟಾಗುತ್ತದೆ. ಸುಖವಾಗಿ ಸಂಸಾರದ ತೇರು ಉರುಳಿಕೊಂಡು ಹೊರಟಿರುವಾಗ... ಇದೆಂಥ ವಿಚಿತ್ರ ಭೀಭತ್ಸ ಕನಸು. ನಿಜವಾದರೆ...

ಅಳು ಉಮ್ಮಳಿಸಿ ಬಂತು. ಕಣ್ಣು ಹರಿಸುತ್ತ ಸಂಜಯನನ್ನೆಬ್ಬಿಸಿದಳು ಸುಜಾತಾ. "ರ್ರೀ... ರ್ರೀ... ಏಳ್ರೀ" ಎಂದು ಎಬ್ಬಿಸಿದಾಗ ಟ್ರಕ್ಕು ಗುಡ್ಡದ ದಾರಿಯಲ್ಲಿ ಹೊರಟಂತೆ 'ಗರ್ರ್...' ಎಂದು ಗೊರಕೆ ಹೊಡೆಯುತ್ತಿದ್ದವ ಎಚ್ಚರವಾಗಿ ಮಂದ ಬೆಳಕಿನಲ್ಲಿ ನಿದ್ದೆಗಣ್ಣಿನಲ್ಲೊಮ್ಮೆ ಅವಳನ್ನು ನೋಡಿದ. ಬೆದರಿ ಎದ್ದು ಕುಳಿತವ "ಏನಾತ... ಇಷ್ಟ್ಯಾಕ ಘಾಬರ್ಯಾಗೀ?" ಎಂದು ಕೇಳಿದ. ಉತ್ತರಿಸದೇ ಅಳುತ್ತಿದ್ದವಳ ಹತ್ತಿರ ಸರಿದು "ಎದಿ ನೊಯ್ಸಲಿಕ್ಕತ್ತದೇನು ಹಾರ್ಟು... ಪಾರ್ಟು... ಏನರೆ?..." ಎಂದ ಕಕ್ಕುಲತೆಯಿಂದ. "ಉಹ್ಞೂಂ..." ಎನ್ನುತ್ತ ಅಡ್ಡಡ್ಡ ತಲೆಯಾಡಿಸಿದವಳನ್ನು "ಮತ್ತ... ಅವ್ವ, ಅಪ್ಪ ನೆನಪಾದ್ರೇನು?" ಎಂದು ತಲೆಯ ಮೇಲೆ ಕೈಯಾಡಿಸಿದ. "ಅದೇನಿಲ್ಲ... ಕೆಟ್ಟ... ಕೆಟ್ಟ... ಕನಸು ಬಿತ್ತು"ಎಂದು ತಡೆತಡೆದು ಹೇಳಿದಳು. ಒಂದು ಕ್ಷಣ ಉಸಿರು ಬಿಟ್ಟು ನಗುತ್ತ, "ಕನಸ ಹೌದಲ್ಲೋ... ಅದಕ್ಯಾಕಿಷ್ಟು ಘಾಬರ್ಯಾಗ್ತೀ?" ಎಂದು ಅವಳನ್ನು ಸಂತೈಸಿದ. ಅವಳು ಬಿಕ್ಕಳಿಸುತ್ತಲೇ ಎಲ್ಲ ವಿವರವಾಗಿ ಹೇಳಿದಳು. ಗಡಿಯಾರದತ್ತ ನೋಡುತ್ತ, "ನಸೀಕ್ಲೆ ಬಿದ್ದ ಕನಸು ಖರೆ ಆಗ್ತಾವಂತ" ಎಂದಳು. "ಅದನ್ನೆಲ್ಲಾ ತಲ್ಯಾಗಿಟಗೋಬ್ಯಾಡಾ. ನಾವು ಯಾರಿಗೇನೂ ಕೆಟ್ಟ ಮಾಡಿಲ್ಲ. ಕೆಟ್ಟ ಬಯಸಿಲ್ಲ. ಎಲ್ಲಾ ಛೊಲೊನ ಆಗ್ತದ. ಕನಸೇನು ಖರೆ ಆಗೂದುಲ್ಲಾ. ಸುಮ್ಮನ ಮಲಕೋ..." ಎಂದು ಅಪ್ಪಿ ಸಂತೈಸಿ ಮಲಗಿಸಿದ. ಅವಳು ಕೇಳಿದರೆ ತಾನೇ... ಎದ್ದು ಮೊಣಕಾಲುಗಳ ಮೇಲೆ ತಲೆ ಇಟ್ಟು ಅಳುತ್ತ ಕುಳಿತುಬಿಟ್ಟಳು. ಎಷ್ಟೇ ಸಮಾಧಾನಿಸಿದರೂ ಸರಿಹೋಗಲಿಲ್ಲ. ಅಷ್ಟರಲ್ಲೇ ಅಲಾರ್ಮ್ ಹೊಡೆದು ದಿನ ಶುರು ಮಾಡಿತ್ತು.

ಬೆಳಗಿನ ಕೆಲಸಗಳು ಒಂದೊಂದಾಗಿ ಆರಂಭವಾದವು. ಆದರೆ ನಿಟ್ಟುಸಿರಿನೊಂದಿಗೆ ಮಂದಗತಿಯಲ್ಲಿ ಸಾಗುತ್ತಿದ್ದವು. ಮಗ ಆಶಿಶ್ ಎದ್ದು ಸ್ನಾನ ಮಾಡಿ ಬಂದವನು, "ಯಾಕ ಹಿಂಗಿದ್ದೀ ಅಮ್ಮಾ... ಆರಾಮಿಲ್ಲೇನು?"ಎಂದು ಕೇಳಿದ. ಹೇಳಲು ತಿಳಿಯದೇ ತಡವರಿಸಿದವಳು "ರಾತ್ರಿ ಯಾಕೋ ನಿದ್ದಿನ ಹತ್ತಲಿಲ್ಲಪಾ" ಎಂದಳು. "ಅಕ್ಕಾನ ಬಗ್ಗೆ ಕಾಳಜಿ ಮಾಡ್ಲಿಕ್ಕತ್ತೀ ಹೌದಲ್ಲೋ... ಅಕಿ ಗೆಳತ್ಯಾರ ಜೋಡಿ ಆರಾಮ ಟ್ರಿಪ್ ಹೊಡದು ಬರ್ತಾಳ. ನೀ ನಿಶ್ಚಿಂತ್ಯಾಗಿರು" ಎಂದ. "ಹ್ಞೂಂ" ಎಂದು ನಕ್ಕರೂ ಆ